ತಾರೀಖು 14ನೇ ಮೇ 1887.

ಕ್ಯಾಂಪ್ ನಂ. 483.—1885ನೇ ಇಸವಿ ಫಿಬ್ರವರೀ 27ನೇ ಮತ್ತು 229ನೇ ನಂಬರುಳ್ಳ ಇಸ್ತಿಹಾರ್‌ನಾಮೆಯಲ್ಲಿ ಫಾಯಿಷ್ ಮಾಡಲ್ಪಟ್ಟ 1ನೇ ನಂಬರ್ ರೂಲ್ಸ್ ಕುರಿತ ಗಾಂಜಾ ಸಾಗುವಳೀದಾರರ ಲೈಸೆನ್ಸಿಯಾನೆ ಪಟ್ಟೀಯ ಇದರಡೀಕಂಡ ನಮೂನೆಯು ಸರ್ವರ ತಿಳುವಳಿಕೆ ಬಗ್ಯೆ ಪ್ರಕಟಿಸಲ್ಪಡುತ್ತೆ:—

ಗಾಂಜಾ ರೂಲ್‌ಶಿಗೆ ಸಂಬಂಧಪಟ್ಟ ಅರ್ಟಿಕಿಲ್ಸ್ A.

ಗಾಂಜಾ ಸಾಗುವಳೀದಾರನ ಲೈಸೆನ್ಸಿಯಾನೆ ಪಟ್ಟೆ.

————ಡಿಸ್ಟ್ರಿಕ್ಟ್————————ತಾಲ್ಲೂಕು ಅಮಲ್ದಾರರಿಂದ.

1885ನೇ ಇಸವಿ ಫಿಬ್ರವರೀ 27ನೇ ಮತ್ತು 229ನೇ ನಂಬರುಳ್ಳ ದಿರ್ಬಾರವರ ಇಸ್ತಿಹಾರ್‌ನಾಮೆಯೊಡನೆ ಫಾಯಿಷ್ ಮಾಡಲ್ಪಟ್ಟ Iನೇ ನಂಬರ್ ರೂಲ್ಸ್ ಅನುಸರಿಸಿ ಯಿದರದೆಕೇಯಿಂದ————————ತಾಲ್ಲೂಕಿನ————————ಗ್ರಾಮದಲ್ಲಿರುವ——ಗೆ ಲೈಸೆನ್ಸ್ ಕೊಡಲ್ಪಟ್ಟಿರುತ್ತೆ, ಮತ್ತು ಸದರೀ——————ನ ಹಿಡುವಳಿಯಲ್ಲಿರುವ————ಯಕರೆ————ಗುಂಟೆ ವಿಸ್ತೀರ್ಣ ಉಳ್ಳ————ರೂಪಾಯಿ ಆಕಾರವುಳ್ಳ——ನೇ ನಂಬರ್ ಜಮ್ಮಾನಿನಲ್ಲಿ ಭಂಗೀಗಿಡ ಸಾಗುವಳೀಮಾಡಿ ಗಾಂಜಾ ಯಂಬ ನಿಷಾ ವಸ್ತುವನ್ನ ಇದರಡೀಕಂಡ ಷರತ್ತುಗಳ ಮೇಲೆ ಉತ್ಪತ್ತಿ ಮಾಡುವ ಬಗ್ಯೆ ಇದರಿಂದ ಅಧಿಕಾರ ಕೊಡಲ್ಪಟ್ಟಿರುತ್ತೆ.

I. ತಯಾರ್ಮಾಡಲ್ಪಟ್ಟ ಗಾಂಜಾವಿನ ತೇದಾದು ಗ್ರಾಮದ ಪಟೇಲ ಮತ್ತು ಶ್ಯಾನುಭೋಗರಿಗೆ ತಿಳಿಸಲ್ಪಟ್ಟು ಅವರ ಸಮಕ್ಷಮ ಅದು ವಜನಿ ಮಾಡಲ್ಪಟ್ಟು ಮತ್ತು ಅದರ ವಿಲೇವಾರಿಯು ಕರಾರ್‌ವಾಕಾ ಆಗಿಯೂ ಕ್ರಮವಾಗಿಯೂ ತೋರಿಸಲ್ಪಡತಕ್ಕದ್ದು.

II. ತಯಾರ್ಮಾಡಲ್ಪಟ್ಟ ಗಾಂಜಾ, ಸಾಧಾರಣವಾಗಿ ಎಂಟುತಿಂಗಳ ವಳಗಾಗಿಯಾಗಲೀ ಅಥವಾ ಡೆಪ್ಯೂಟಿ ಕಮ್ಮಿಷನರವರಿಂದ ಮುಂದಾಗಿ ಅಪ್ಪಣೆ ಪಡೆದು ಅದು ತಯಾರ್ಮಾಡಲ್ಪಟ್ಟ ಮೂರು ತಿಂಗಳ ವಳಗಾಗಿಯಾಗಲೀ ಗವರ್ನಮೆಂಟ್ ತರಫ ಕಂಟ್ರಾಕ್ಟುದಾರನಿಗೆ ನ್ಯಾಯವಾದ ಮೌಲ್ಯಕ್ಕೆ ವಿಕ್ರಯಿಸಲ್ಪಡತಕ್ಕದ್ದು, ಯಾ D ಫಾರಂ ಪ್ರಕಾರ ಲೈಸೆನ್ಸ್ ಅನುಸರಿಸಿ ರಫ್ತು ಮಾಡಲ್ಪಡತಕ್ಕದ್ದು. ಇದಕ್ಕೆ ತಪ್ಪಿದರೆ ಗಾಂಜಾ ಜಪ್ತು ಮಾಡಲ್ಪಟ್ಟು ಸರಕಾರದಿಂದ ವಿಕ್ರಯಿಸಲ್ಪಡುವದು.

III. ಲೈಸೆನ್ಸಿದಾರನು, ಅವನಿಗೆ ಅಪೇಕ್ಷೆಯಿದ್ದರೆ, ಅವನ ಸ್ವಂತಖರ್ಚಿನ ಬಗ್ಯೆ ಅಮಲ್ದಾರರಿಂದ ಕೊಡಲ್ಪಡುವ ಪ್ಯೂಣನ ಆಧಾರದ ಮೇಲೆ ಮತ್ತು ಭಂಗಿ ಸಾಗುವಳೀ ಮಾಡಲ್ಪಟ್ಟ ಜಮೀನು ವಂದು ಯಕರೆಗಿಂತ ಕಮ್ಮಿ ಯಿಲ್ಲದ ಪಕ್ಷದಲ್ಲಿ 14 ಕಾರ್ಡಿಗಳಿಗಿಂತ ಜಾಸ್ತಿ ಅಲ್ಲದ ಗಾಂಜಾವನ್ನ ಉಳಸಿಕೊಳ್ಳಬಹುದು. ಹಾಗಿಲ್ಲದ ಪಕ್ಷದಲ್ಲಿ ಸ್ವಂತ ಖರ್ಚಿನ ಬಗ್ಯೆ ಅವಕಾಶ ಕೊಡಲ್ಪಡಲಾರದು. ಲೈಸೆನ್ಸಿದಾರನು ಈ ರೂಲ್ಸ್ ಅನುಸರಿಸಿ ತನ್ನ ಸ್ವಂತ ಉಪಯೋಗದ ಬಗ್ಯಾಗಿ ಉಳಸಿಕೊಂಡ ಗಾಂಜಾವೆನ್ನ ವಿಕ್ರಯಿಸಕೂಡದು ಯಾ ಅನ್ಯಥಾ ವಿಲೇ ಮಾಡಕೂಡದು.

IV. ಈ ಲೈಸೆನ್ಸಿಯಾನೆ ಪಟ್ಟೆಯು ವಂದು ವರ್ಷಕ್ಕೆ ಅಂದರೆ————ಲಾಗಾಯತು————ವರಿಗೆ ಜಾರೀಯಲ್ಲಿರತಕ್ಕದ್ದು, ಮತ್ತು ಯಿದರಲ್ಲಿಯಾಗಲೀ ಯಕ್ಸೈಸ್ ಆಕ್ಟಿನಲ್ಲಾಗಲೀ ಯಾ ಅದನ್ನನುಸರಿಸಿ ಮಾಡಲ್ಪಟ್ಟ ರೂಲ್ಸ್‌ನಲ್ಲಾಗಲಿ ಅಡಗಿ ಯಿರತಕ್ಕ ಯಾವ ಷರತ್ತುಗಳನ್ನಾದರೂ ಉಲ್ಲಂಘಿಸಿದರೆ ಲೈಸೆನ್ಸಿದಾರನು ಸದರೀ ಯಕ್ಸೈಸ್ ಆಕ್ಟಿನಲ್ಲಿ ವಿಧಿಸೋಣಾದ ದಂಡನೆಗಳಿಗೆ ಗುರಿಯಾಗತಕ್ಕದ್ದಲ್ಲದೆ ಸಂಬಂಧಪಟ್ಟ ತಮಾಂ ನಿಷಾ ಪದಾರ್ಥವೂ ಜಪ್ತಿ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

V. ಈ ಲೈಸೆನ್ಸಿಯಾನೆ ಪಟ್ಟೆಯು, ಮೇಲಿಕಂಡ ಕಲಮಿನಲ್ಲಿ ಕಂಡ ವಾಯಿದೆಯು ಪೂರೈಸಿದ ತರುವಾಯ ತಾಲ್ಲೂಕು ಅಮಲ್ದಾರರಿಗೆ ವಾಪಸ್ ಮಾಡಲ್ಪಡತಕ್ಕದ್ದು, ಮತ್ತು ಸದರೀ ಆಫೀಸರರು ತಯಾರ್ ಮಾಡಲ್ಪಟ್ಟ ಗಾಂಜಾ ಹ್ಯಾಂಗೆ ವಿಲೇವಾರಿ ಮಾಡಲ್ಪಟ್ಟಿತೆಂಬ ವಿಷಯ ಅದರಮೇಲೆ ಷರಾ ಮಾಡತಕ್ಕದ್ದು. ಲೈಸೆನ್ಸಿದಾರನು ಮೇಲ್ಕಂಡಂತೆ ಲೈಸೆನ್ಸನ್ನ ವಾಪಸ್ ಮಾಡದಿದ್ದರೆ ಅತನು ಯಕ್ಸೈಸ್ ಆಕ್ಟು ಅನುಸರಿಸಿ ಫಿರ್ಯಾದ ಮಾಡಲ್ಪಡಲಿಕ್ಕೆ ಗುರಿಯಾಗತಕ್ಕದ್ದು.

188—ನೇ ಇಸವಿ————ಮಾಹೆ————ತಾರೀಖಿನಲ್ಲಿ ನಮ್ಮ ಸೈನ್ ಮೊಹರ್‌ನಿಂದ ಕೊಡಲ್ಪಟ್ಟಿರುತ್ತೆ.

ಮೊಹರ್.

ಅಮಲ್ದಾರ್
——ತಾಲ್ಲೂಕು.

ತಾರೀಖು 14ನೇ ಮೇ 1887.

ನಂ. 16.—ಸಕಲ ಜನಗಳಿಗೂ ತಿಳಿಯುವ ಬಗ್ಯೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದರಡೀ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕೀ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದರಡೀ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ವ ತಾರೀಖಿನಲ್ಲೂ ಬಹಿರಂಗವಾದ

ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪೂರ್ತಿಯಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜ್ ನಿಲ್ಲುವದು.

2. ಪರಂತು ಒಂದು ಗ್ರಾಮವು ಜೇರೆಜೇರೆಯಾಗಿ ಮಂಜೂರ್ಮಾಡಲ್ಪಟ್ಟ ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡಿಪ್ಯೂಟಿ ಕಮ್ಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮವನ್ನು ವಿಕ್ರಯಿಸುವದಕ್ಕೆ ಬದಲಾಗಿ ಪ್ರತಿ ಒಂದು ವೃತ್ತಿಯನ್ನೂ ಜೇರೆಜೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರನು ಹರಾಜ್ ಕಾಲದಲ್ಲಿ ಕ್ರಯದ ಮೊಬಲಗ್ ಪೈಕೀ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗ್ ಪೈಕೀ ಬಾಕೀಯನ್ನು ಹರಾಜು ತಾರೀಖು ಲಾಗಾಯತು 15 ದಿನಗಳೊಳಗಾಗಿ ಪಾವತೀ ಮಾಡದೇ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗದುಕೊಳ್ಳಲಿಕ್ಕೆ ಗುರಿಯಾಗತಕ್ಕದ್ದು.

4. ಅಂಥಾ ಡಿಪಾಜಿಟ್ ಮೊಬಲಗನ್ನು ಕೊಡದೇ ಹೋದರೆ, ಅಥವಾ ಬಾಕೀ ಕ್ರಯದ ಮೊಬಲಗನ್ನು ಪಾವತೀ ಮಾಡದಿದ್ದರೆ ಜಮೀನುಗಳು ಆಪ್ಪೆಲ್ ಕ್ರಯದಾರನ ಖರ್ಚಿನಲ್ಲಿ ವಸೂಲಾನಾಗಿ ಮರಳಿ ಹರಾಜು ಹಾಕಲ್ಪಡುವವು.

5. ಹರಾಜಿನಲ್ಲಿ ದರಖಾಸ್ತು ಮಾಡತಕ್ಕವರು ತಮ್ಮ ಸ್ವಂತಕ್ಕೆ ದರಖಾಸ್ತು ಮಾಡುತ್ತಾರೆಯೋ ಯಾ ಮುತಾಲೀಕರ ತರೀಕ್ ದರಖಾಸ್ತು ಮಾಡುತ್ತಾರೆಯೋ ಎಂಬದನ್ನು ನಮೂದಿಸತಕ್ಕದ್ದು. ಮುತಾಲೀಕರಾಗಿದ್ದ ಪಕ್ಷಕ್ಕೆ ತಮ್ಮ ಮುಖ್ತ್ಯಾರಿಂದ ರುಜು ಮಾಡಲ್ಪಟ್ಟ ಬರವಣಿಗೇ ಮೂಲಕವಾದ ಅಧಿಕಾರ ಪತ್ರಿಕೆಯನ್ನು ಹಾಜರ್ಮಾಡತಕ್ಕದ್ದು. ಹಾಗಿಲ್ಲದ ಪಕ್ಷಕ್ಕೆ ಅಂಥವರ ದರಖಾಸ್ತು ತಿರಸ್ಕರಿಸಲ್ಪಡಬಹುದು.

6. ಸರ್ಕಾರದ ಹಣ ಕೊಡಲಿಕ್ಕೆ ತಪ್ಪಿದ ಮನುಷ್ಯನಾಗಲಿ, ಅವನ ತರಫಿನಲ್ಲಿ ಕೆಲಸ ನಡಿಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕು ಐಟೆಂಬ ಇತರ ಯಾವ ಮನುಷ್ಯನಾಗಲಿ, ಬಡ್ಡೀ ಯಾ ಇತರ ಖರ್ಚುಗಳು ದೀವೀಲ್ ಕಂಪಾಯದ ಬಾಕೀ ಮೊಬಲಗನ್ನು ಪೂರಾ ಹಾಜರ್ ಮಾಡಿದರೆ, ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು. ಪರಂತು ಹರಾಜಿಗೆ ಗೊತ್ತಾದ ದಿನಕ್ಕೆ ಹಿಂದಿನ ದಿನದ ಸೂರ್ಯಾಸ್ತಮಯಕ್ಕೆ ಮುಂಚಿತವಾಗಿ ಸದರೀ ಹಣ ಹಾಜರ್ ಮಾಡತಕ್ಕದ್ದು.

7. ದಿವಾನರವರಿಂದ ಮಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಕಾಯಮ್ಮಾದ್ದಾಗುವದಿಲ್ಲವು.

8. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತೀ ಮಾಡಿ, ಹರಾಜನ್ನು ದಿವಾನರವರು ಖಾಯಂ ಮಾಡಿದ ಕೂಡ್ಲೆ ಗ್ರಾಮವು ಅತನ ಸುಪರ್ದಿ ಮಾಡಲ್ಪಟ್ಟು, ಕ್ರಯದಾರನ ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡಿಪ್ಯೂಟಿ ಕಮ್ಮಿಷನರವರಿಂದ ರುಜು ಮೊಹರ್ ಮಾಡೋಣಾದ ಒಂದು ಸರಟಿಫಿಕೇಟ್ ಅತನಿಗೆ ಕೊಡಲ್ಪಡುವದು. ತಹಸೀಲ್ದಾರ್ಗಳಾಗಲಿ ಅಂದಾಜಾ ಭೀಜವರೀ ವಿಷಯದಲ್ಲಾಗಲಿ ಇರುವ ಗಲ್ಲತಿಗಳಿಗೆ ಸರ್ಕಾರದವರು ಜವಾಬ್ದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

9. ಪರಂತು, ಸದರೀ ಹರಾಜಿನಿಂದ ಸುರ್ಕ್ಯೂ ಪಟ್ಟಂತೆ ಎಣಿಸುವ ಜನಗಳು ಹರಾಜು ತಾರೀಖು ಲಾಗಾಯತು 30 ದಿನಗಳೊಳಗಾಗಿ ದಿವಾನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್ನಲ್ಲಿ ಆಗುವ ಚಿಪ್ಪೈರ್ ಹುಕ್ಕುಮಿಗೆ ಸದರೀ ಕ್ರಯವು ಒಳಪಟ್ಟಿರುತ್ತೆ.

ತಿನ್ನುವ ಅನ್ನದ ಹೋಬಳಿ.	ಗ್ರಾಮ.	ಜೋಡೀದಾರರ ಹೆಸರು.	ಅಂದಾಜಾ ಬೀಜವರೀ.	ಅಂದಾಜಾ ಹುಟ್ಟುವಳಿಯ ಯಾ ಪೈರೀಜು.	ಸಾಲಿಯಾನಾ ಸರ್ಕಾರಕ್ಕೆ ಕೊಡಬೇಕಾದ ಕ್ವಿಟ್ರೆಂಟ್.	ಯಾವ ಬಾಕೀಗೋಸ್ಕರ ಗ್ರಾಮವು ಹರಾಜು ಮಾಡಲ್ಪಡುತ್ತೋ ಅಂಥಾ ಸರಕಾರದ ಕಂದಾಯದ ಬಾಕೀ.	ಹರಾಜು ತಾರೀಖು ವಗೈರೆ.
ಕಸಬಾ ಹೋಬಳಿ.	ಕಡೂರು ಸ್ಥಾಪಿತದ ಲಿಂಗದಹಳ್ಳಿ	ಖಂ. ಕೂ. ಪ. ಜನ	ರೂ. ಆ. ಪೈ.	ರೂ. ಆ. ಪೈ.	ರೂ. ಆ. ಪೈ.		
		ಶ್ಯಾನುಭೋಗ 2,988 0 0 ನಿ ಮೈನರ್ 9 ಜನ	1,347 0 0	560 3 0	281--3—7	ಮತ್ತು ಹರಾಜ್ ತಾರೀಖು ವರ್ತಮಾನ ಬಡ್ಡೀ.	ಮುಂದಿನ ತಿಂಗಳು ತಾರೀಖು 22ರಲ್ಲು ತಾಲ್ಲೂಕು ಕಛೇರಿಯಲ್ಲಿ ಅಸಿಸ್ಟೆಂಟ್ ಕಮ್ಮಿಷನರ್ ಯಾ ಅಮಲ್ದಾರ್ರು ರೂಬರೂ.

ತಾರೀಖು 27ನೇ ಮೇ 1887.

ನಂ. 21.—ಮೆ॥ ಡಿ. ನಾಮಕಲ್‌ರಾಯರು, 1887ನೇ ಮೇ 20ನೇ ಮರ್ಕುಮಿನ ಮಧ್ಯಾನ್ಹಾತ್ಪರ ಕ್ಲೋಸ್‌ಪೇಟೆ ಸಬ್ ಡಿವೀಜನಿನ ಚಾರ್ಜನ್ನು ಮೆ॥ ಯಸ್. ಹೆಚ್. ವಾರರ್ಡ್ ಯವರಿಂದ ವಹಿಸಿರುತ್ತಾರೆ.

ನಂ. 22.—ಶ್ರೀರಂಗಪಟ್ಟಣದ ಡೆಪ್ಯುಟಿ ಅಮಲ್‌ದಾರ್ ರಾಘವೇಂದ್ರರಾಯರಿಗೆ, ಮಾಹೆ ಗುಜಸ್ತಾ 21ನೇ ಮರ್ಕುಂ ಲಾಗಾಯ ತು ಯರಡು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ನಂ. 23.—ಮೆ॥ ಟಿ. ಆನಂದರಾಯರು, 1887ನೇ ಮೇ 19ನೇ ಮರ್ಕುಮಿನ ಮಧ್ಯಾನ್ಹಾತ್ಪರ ಮೈಸೂರು ಡಿಸ್ಟ್ರಿಕ್ಟು ಆಫೀಸ್ ವ ಟ್ರೆಜರೀ ಚಾರ್ಜನ್ನು ಅಸಿಸ್ಟೆಂಟ್ ಕಮ್ಮಿಷನರ್ ಮೆ॥ ಬಿ. ಕೆ. ವೆಂಕಟವರದಯ್ಯಂಗಾರ್ರವರಿಂದ ವಹಿಸಿರುತ್ತಾರೆ.

ನಂ. 24.—ಮೆ॥ ಎಸ್. ಹೆಚ್. ವಾರರ್ಡ್‌ಯವರು, 1887ನೇ ಮೇ 20ನೇ ಮರ್ಕುಮಿನ ಮಧ್ಯಾನ್ಹಾತ್ಪರ ಬೆಂಗಳೂರು ಡಿಸ್ಟ್ರಿಕ್ಟ್ ಫಸ್ಟ್ ಅಸಿಸ್ಟೆಂಟ್ ಕಮ್ಮಿಷನರ್ ಆಫೀಸ್ ಚಾರ್ಜನ್ನು ಮೆ॥ ಸಯ್ಯದ್ ನಸಿರುದ್ದೀ ಯವರಿಂದ ವಹಿಸಿರುತ್ತಾರೆ.

ನಂ. 25.—ಮೆ॥ ಪಿ. ಯರ್. ಪೂರ್ಣಯ್ಯನವರು, 1887ನೇ ಮೇ 24ನೇ ಮರ್ಕುಮಿಸ ಪೂರ್ವಾನ್ಹದಲ್ಲಿ ಹಾಸನ ಡಿಸ್ಟ್ರಿಕ್ಟು ವ ಟ್ರೆಜರೀ ಚಾರ್ಜನ್ನು ಮೆ॥ ಕೆ. ರಾಮಚಂದ್ರರಾಯರವರಿಂದ ವಹಿಸಿರುತ್ತಾರೆ.

ನಂ. 26.—ಮೆ॥ ಯಿ. ಸಿ. ಷಣ್ಮುಗವೇಲುಪಿಳ್ಳೆಯವರು, ಮಾಹೆ ಮಜಕೂರ್ 20ನೇ ಮರ್ಕುಮಿನ ಪೂರ್ವಾನ್ಹದಲ್ಲಿ ಟ್ಯೂ ಮೂಜಿಸ್ಟ್ರೇಟ್ ಕೋರ್ಟಿನ ಚಾರ್ಜನ್ನು ತೆಗದುಕೊಂಡದರಿಂದ, 1887ನೇ ಏಪ್ರೆಲ್ 29ನೇ ಮರ್ಕುಂ, ಕ್ಯಾಂಪ್ ನಂಬರ್ 246ನೇ ಇಸ್ತಿಹಾರ್‌ನಾಮೆಯಿಂದ ಕೊಡಲ್ಪಟ್ಟದ್ದ ಪ್ರಿವಿಲೀಜ್ ರಜಾದ ಪೈಕಿ ಉಪಯೋಗಿಸಿಕೊಳ್ಳದ ನಾಲ್ಕು ದಿನಗಳ ರಜಾ ರದ್ದುಮಾಡಲ್ಪಟ್ಟಿರುತ್ತೆ.

ನಂ. 27.—ಚಿತ್ರದುರ್ಗ ತಾಲ್ಲೂಕು ಅಮಲ್‌ದಾರ್ ನಾರಣಯ್ಯಂಗಾರ್ರಿಗೆ, ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯ ತು ಮೂರು ತಿಂಗಳ ಪ್ರಿವಿಲೀಜ್ ರಜಾ ಕೊಡಲ್ಪಟ್ಟಿರುತ್ತೆ.

ಚಿತ್ರದುರ್ಗದ ಡೆಪ್ಯುಟಿ ಕಮ್ಮಿಷನರ್ ಆಫೀಸ್ ಹೆಡ್ ಅಕೌಂಟೆಂಟ್ ಸಿ. ಯರ್. ಚೌಡಯ್ಯನವರು, ಸದರೀ ನಾರಣಿಯ್ಯಂಗಾರ್ರ ಗೈರ್ ಹಾಜರೀಯಲ್ಲಿ ಯಾ ಮತ್ತೊಂದು ಹುಕ್ಕುಂ ಕೊಡುವ ಪರಿಯಂತ, ಚಿತ್ರದುರ್ಗ ತಾಲ್ಲೂಕು 3ನೇ ಕ್ಲಾಸ್ ಮೂಜಿಸ್ಟ್ರೇಟ್ ವ 5ನೇ ಗ್ರೇಡ್ ಅಮಲ್‌ದಾರ್‌ರಾಗಿ ಆಕ್ಟಿಂಗ್ ತರೀಕ್ ವೊಕರರ್ಮಾಡಲ್ಪಟ್ಟಿರುತ್ತಾರೆ.

ನಂ. 28.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಶ್ನ್ ಆಕ್ಟ್ 6ನೇ ಸೆಕ್ಷನ್ ನಿಯಮಗಳನುಸರಿಸಿ ಪ್ರಕಟಪಡಿಸುವದೇನಂದರೆ, ಇದರಡೀ ಕಂಡ ತಖ್ತೆಯಲ್ಲಿ ವಿವರಿಸಲ್ಪಟ್ಟ ಜಮೀನ್ ಸರ್ಕಾರ್ ಕೆಲಸಕ್ಕೆ ಅಂದರೆ, ಕಡಬದ ಕೆರೆ ವಿರಿ ರಿಪೇರಿಗೋಸ್ಕರ ಮಣ್ಣು ಅಗಿಯುವ ಬಗ್ಗೆ ಬೇಕಾಗಿರುತ್ತೆ:—

ತಾಲ್ಲೂಕು.	ಗ್ರಾಮ.	ಹಿಡುವಳಿದಾರನ ಹೆಸರು.	ನಂಬರ್.	ನಂಬರು.	ವಿಸ್ತೀರ್ಣ.	ಕಂಡಾಯ.	ಚತುರ್ಗಡಿ.
ಗುಬ್ಬಿ	ಕಡಬ	ನಾರಾಯಣಸಾವಯ್ಯಂಗಾರ್, (ಹಿಡುವಳಿದಾರ ಗೈರುಹಾಜರು.)	ಬಾಗಾಯತು	54	ಖ. ಗು. ಗ. 0 1 119	ಖ. ಅ. ಗ. 0 4 0	ಪೂರ್ವಕ್ಕೆ ಕೊರೆಕಲು, ಪಶ್ಚಿಮಕ್ಕೆ ಬಾಗಾಯತು ನಂಬರ್ 52 ಮತ್ತು 54ರ ಪೈಕಿ ಉತ್ತರಕ್ಕೆ ಕೆರೆಏರಿ, ದಕ್ಷಿಣಕ್ಕೆ ನಂಬರ್ 54ರ ಪೈಕಿ ಮತ್ತು ಬಾಗಾಯತು ನಂಬರ್ 55.

ತಾರೀಖು 14ನೇ ಮೇ 1887.

ಕ್ಯಾಂಪ್ ನಂ. 468.—ಸರ್ವೆ ಸೂಪರಿಂಟೆಂಡೆಂಟರವರ ಆಫೀಸ್ ಶಿರಸ್ತೇದಾರ್ ಲಿಂಗೋಮಲ್ಲಾರ್‌ನಾಯಕರು 4ನೇ ಗ್ರೇಡ್ ಅಮಲ್ದಾರರಾಗಿ ಮೊಕರರ್ ಮಾಡಲ್ಪಟ್ಟು ಸದರೀ ದರ್ಜೆಯಲ್ಲಿ ಸೂಪರ್‌ನ್ಯೂಮರೆರಿಯಾಗಿರತಕ್ಕದ್ದು.

ಕ್ಯಾಂಪ್ ನಂ. 538.—ಬೆಂಗಳೂರು ಡಿಸ್ಟ್ರಿಕ್ಟು ಅಸಿಸ್ಟೆಂಟ್ ಕಮ್ಮಿಷನರ್ ಮೆ|| ಸೈಯ್ಯದ್‌ನಸಿರುದ್ದೀಯವರು, ಬೆಂಗಳೂರು ಟರ್ವ ಮಾಜಿಸ್ಟ್ರೇಟ್ ಕೋರ್ಟು ಜಾರ್ಜ್ ವಹಿಸಿರುವ ಕಾಲದಲ್ಲಿ ಕ್ರಿಮಿನಲ್ ಪ್ರೊಸಿಡ್ಯೂರ್ ಕೋಡಿನ XXIIನೇ ಚಾಪ್ಟರ್ ಅನುಸರಿಸಿ ಮೊಕದ್ದಮೆಗಳನ್ನು ಪೂರ್ತಾಗಿ ವಿಚಾರಣೆ ಮಾಡುವ ಬಗ್ಗೆ ಇದರದೆಶೆಯಿಂದ ಅಧಿಕಾರ ಕೊಡಲ್ಪಟ್ಟಿರುತ್ತಾರೆ.

ತಾರೀಖು 19ನೇ ಮೇ 1887.

ಕ್ಯಾಂಪ್ ನಂ. 551.—1870ನೇ ಇಸವಿ Xನೇ ನಂಬರ್ ಲ್ಯಾಂಡ್ ಅಕ್ವಿಜಿಶನ್ ಆಕ್ಟಿನ 6ನೇ ಸೆಕ್ಷನ್ ಅನುಸರಿಸಿ ಇದರಿಂದ ಪ್ರಕಟಪಡಿಸುವದೇನಂದರೆ, ಇದರಡೀಕಂಡ ತಖ್ತೇಯಲ್ಲಿ ವಿವರಿಸಲ್ಪಟ್ಟ ಜಮೀನುಗಳು ಮೈಸೂರು ಪಟ್ಟಣದಲ್ಲಿ ಸರ್ಕಾರ್ ಕೆಲಸಕ್ಕೋಸ್ಕರ ಬೇಕಾಗಿರುತ್ತೆ:—

ತಖ್ತೇ.

ನಂಬರ್.	ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ವಿಸ್ತೀರ್ಣ.		ವಿವರಣೆ.	ಯಾವ ಕೆಲಸಕ್ಕೆ ಬೇಕಾಗಿರುತ್ತೆ.	ಚಕ್ಕುಬಂದಿ ತಪಸೀಲ್.
			ಪೂರ್ವ ಪಶ್ಚಿಮ.	ಉತ್ತರ ದಕ್ಷಿಣ.			
			ಅಡಿ.	ಅಡಿ.			
1	ದೊಡ್ಡಕೆರೆ ಯೇರಿ ಹಿಂಭಾಗದ ಕೃಷ್ಣರಾಜಮೊಹಲೆ	ಚಿದ್ದಬಸವದೇವರು	50 500 300 94	150 200 144 74	ಮನೆ ದೇಖೀಲ್ ತೋಟ	ಗಲೀಜು ಜಮೀನು ಯಿಸುವ ಸರಕಾರದ ಕಾರಖಾನೆ ಬರ್ಣ್ಯಯ್ಯನವರ ಕಾಲ್ವೆ	ಪೂರ್ವಕ್ಕೆ ದೊಡ್ಡಕೆರೆ ಯೇರಿ ಹಿಂಭಾಗದ ರಸ್ತೆ, ಪಶ್ಚಿಮಕ್ಕೆ ಪೂರ್ವ ಜಪದಕಟ್ಟೆ ಮಠ, ಉತ್ತರಕ್ಕೆ ಸರಕಾರದ ಗಲೀಜು ಕಾರಕಾನೆ.
1	ದೇವರಾಜಮೊಹಲ್ಲಾದ ಸಂತೇಬೀದಿ	ಪುಟ್ಟಬಸಪ್ಪ	58	34	ತಾರಸಿ ಮನೆಯ 2 ಅಂಕಣ, ಹಂಚಿನಮನೆಯ 3 ಅಂಕಣ, ಹಂಚಿನ 3 ಅಂಕಣದ ಕೈಸಾಲೆ ಮತ್ತು ಭಾವಿ	ರಮೂವಿಲಾಸದ ರಸ್ತೆ ಬಡಾಯಿಸುವ ಬಗ್ಗೆ.	ಪೂರ್ವಕ್ಕೆ ಬಂಜರ್ ಜಮೀನು, ದಕ್ಷಿಣಕ್ಕೆ ಶ್ರೀನಿವಾಸಕಟ್ಟೆ, ಪಶ್ಚಿಮಕ್ಕೆ ರಮೂವಿಲಾಸದ ರಸ್ತೆ, ಮತ್ತು ಉತ್ತರಕ್ಕೆ ಜೋಗಿ ಚಿದ್ದಯ್ಯನ ಮನೆ.
2	ಡಿಟೋ ಡಿಟೋ	ಜೋಗಿ ಸಿದ್ದಯ್ಯ	38	15	ಹಂಚಿನ ಮನೆಯ 4 ಅಂಕಣಮತ್ತು ಹಂಚಿನ ಕೈಸಾಲೆಯ 8 ಅಂಕಣ	ಡಿಟೋ	ಪೂರ್ವಕ್ಕೆ ಬೊಮ್ಮಯ್ಯನಛತ್ರ, ದಕ್ಷಿಣಕ್ಕೆ ಪುಟ್ಟಬಸಪ್ಪನವರ ಮನೆ, ಮತ್ತು ಗುಡಿ, ಪಶ್ಚಿಮಕ್ಕೆ ರಮೂವಿಲಾಸದ ರಸ್ತೆ ಮತ್ತು ಉತ್ತರಕ್ಕೆ ಬೊಮ್ಮಯ್ಯನ ಛತ್ರಕ್ಕೆ ಹೋಗುವ ರಸ್ತೆ.
3	ಡಿಟೋ ಡಿಟೋ	ಪಾಪಯ್ಯ	96	24	ತಖ್ತಪೋಷ್ ಮನೆಯ 9 ಅಂಕಣ, ಹಂಚಿನ ಮನೆಯ 9 ಅಂಕಣಮತ್ತು ಹಂಚಿನ ಕೈಸಾಲೆಯ 9 ಅಂಕಣ	ಡಿಟೋ	ಪೂರ್ವಕ್ಕೆ ಕೋಟೆ ಕಂದಕದ ಪಕ್ಕದಲ್ಲಿರುವ ರಸ್ತೆ, ದಕ್ಷಿಣಕ್ಕೆ ನರಸಿಂಹಯ್ಯನ ಮನೆ, ಪಶ್ಚಿಮಕ್ಕೆ ರಾಜಬೀದಿ ಮತ್ತು ಉತ್ತರಕ್ಕೆ ಕಣುವಯ್ಯನ ಮನೆ.

ನಂಬರ್.	ಇರತಕ್ಕ ಪ್ರದೇಶ.	ಸ್ವಂತಗಾರರ ಹೆಸರು.	ವಿಸ್ತೀರ್ಣ. ಪೂರ್ವ ಪಶ್ಚಿಮ.	ವಿಸ್ತೀರ್ಣ. ಉತ್ತರ ದಕ್ಷಿಣ.	ವಿವರಣೆ.	ಯಾವ ಕೆಲಸಕ್ಕೆ ಬೇಕಾಗಿರುತ್ತೆ.	ಚಕ್ಕುಬಂದಿ ತಪಸೀಲ್.
4	ದೇವರಾಜ ಮೊಹಲಾದ ಸಂತೇಬೀದಿ.	ನರಸಿಹ್ಮ.	96	13	ಹಂಚಿನ ಮನೆಯ $4\frac{1}{2}$ ಅಂಕಣ ಮತ್ತು ಹಂಚಿನ ಕೈಸಾಲೆಯ 3 ಅಂಕಣ.	ಅಮೂವಿಲಾಸದ ರ ಬಗ್ಯೆ.	ಪೂರ್ವಕ್ಕೆ ಕೋಟೆ ಕಂದಕದ ಪಕ್ಕದಲ್ಲಿರುವ ರಸ್ತೆ, ದಕ್ಷಿಣಕ್ಕೆ ಚಿನ್ನಪ್ಪನಮನೆ, ಪಶ್ಚಿಮಕ್ಕೆ ರಾಜಬೀದಿ ಮತ್ತು ಉತ್ತರಕ್ಕೆ ಪಾವಯ್ಯನ ಮನೆ.
5	ಡಿಟೋ ಡಿಟೋ	ಚಿನ್ನಯ್ಯ	96	13	ಹಂಚಿನ ಮನೆಯ $4\frac{1}{2}$ ಅಂಕಣ ಮತ್ತು ಕೈಸಾಲೆಯ 3 ಅಂಕಣ.	ಡಿಟೋ	ಪೂರ್ವಕ್ಕೆ ಕೋಟೆ ಕಂದಕದ ಪಕ್ಕದಲ್ಲಿರುವ ರಸ್ತೆ, ಪಶ್ಚಿಮಕ್ಕೆ ರಾಜಬೀದಿ, ಉತ್ತರಕ್ಕೆ ನರಸಿಹ್ಮಯ್ಯನ ಮನೆ, ದಕ್ಷಿಣಕ್ಕೆ ನರಸಿಹ್ಮಯ್ಯನ ಮನೆ.
1	ಕೃಷ್ಣರಾಜ ಮೊಹಲಾದ ವರಹಾಸ್ವಾಮಿ ಅಗ್ರಹಾರದ ಬೀದಿ.	ಮೈಸೂರು ತಾಲ್ಲೂಕು ರಿಕಾರ್ಡ್ ಕೀಪರ್ ವ್ಯಾಸರಾಯರು.	34	6	ಹಂಚಿನ ಮನೆಯ 5 ಅಂಕಣ.	ಪಾಕೀಜ್ ಇಡತಕ್ಕ ಬಗ್ಯೆ ಜರಂಡಿ ತಯಾರಿಗೋಸ್ಕರ.	ಪೂರ್ವಕ್ಕೆ ಭೀಮರಾಯರ ಮನೆ, ಪಶ್ಚಿಮಕ್ಕೆ ಶಾಮರಾಯರ ಮನೆ, ದಕ್ಷಿಣಕ್ಕೆ ನೀಲಕಂಠರಾಯರ ಮನೆ ಮತ್ತು ಉತ್ತರಕ್ಕೆ ವ್ಯಾಸರಾಯರ ಮನೆ.
1	ನಜರ್‌ಬಾದ್ ಮೊಹಲಾದ ಇಟ್ಟಿಗೆಣ ಗೂಡು.	ಬಂಡಿ ಚಿಕ್ಕಂಣ ಬಂಡಿ ಲಿಂಗಂಣ.	$24\frac{1}{2}$ 37	13 18	ಹಂಚಿನ ಮನೆಗಳು ಹಿತ್ತಲುಗಳು ಸಹ.	ಇಟ್ಟಿಗೆ ಗೂಡಿನ ರಸ್ತೆಯ ಅಗಲ ಬಡಾಯಿಸುವಬಗ್ಯೆ	ಪೂರ್ವಕ್ಕೆ ರಾಜಬೀದಿ, ಪಶ್ಚಿಮಕ್ಕೆ ಬೆಟ್ಟಣ್ಣನ ಮನೆ, ಉತ್ತರಕ್ಕೆ ಭವಾನಮ್ಮನ ಮನೆ, ದಕ್ಷಿಣಕ್ಕೆ ಮ್ಯುನಿಸಿಪಲ್ ಬಂಜರ್ ಜಮೀನ್.

ನಂ. 20.—ಮೈಸೂರು ಗವರ್ಮೆಂಟ್ ಸೀನಿಯರ್ ಸರ್ಜ್ಜರವರು, ಮೈಸೂರು ಗವರ್ಮೆಂಟ್ ಯುಕ್ಸ್-ಅಫಿಷಿಯೊ ಸ್ಯಾನಿಟೆರಿ ಕಮ್ಮಿಷನರಾಗಿ ಮೊಕರರ್ರಾಡಲ್ಪಟ್ಟಿರುತ್ತಾರೆ.

ತಾರೀಖು 17ನೇ ಮೇ 1887.

ಕ್ಯಾಂಪ್ ನಂ. 505.—ಪ್ರೊಬೇಷನರಿ ಅಸಿಸ್ಟೆಂಟ್ ಕಮ್ಮಿಷನರುಗಳಾದ ಮೆ|| ಹೆಚ್. ವಿ. ನಂಜುಂಡಯ್ಯ, ವ ಮೆ|| ಯ್ಯ. ನರಸಿಹ್ಮಯ್ಯಂಗಾರ್‌ಯವರು, 1887ನೇ ಇಸವಿ ಏಪ್ರಿಲ್ 1ನೇ ತಾರೀಖು ಲಾಗಾಯತು 4ನೇ ಗ್ರೇಡ್ ಅಸಿಸ್ಟೆಂಟ್ ಕಮ್ಮಿಷನರುಗಳಾಗಿ ಇರತಕ್ಕದ್ದು.

ಹುಕ್ಕುಂ ಬಮೋಜೀಬ್,

ಆರ್. ವಿಜಯೀಂದ್ರರಾವ್,

ಜೀಫ್ ಸೆಕ್ರಿಟೇರಿ.